**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 390 |
| 2 | ಸದಸ್ಯರ ಹೆಸರು | : | ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 07.12.2023 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

<table>
<tr><th>ಕ್ರ.ಸ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ</td><td>ಕಲಬುರಗಿ ಜಿಲ್ಲೆಯಲ್ಲಿ ಜಾರಿಗೊಳಿಸಿರುವ "ಜನ ಸ್ನೇಹಿ ಪೊಲೀಸ್" ವ್ಯವಸ್ಥೆಯಿಂದ ಸಾರ್ವಜನಿಕರಿಗೆ ಆಗುತ್ತಿರುವ ಅನುಕೂಲಗಳೇನು; (ವಿವರ ನೀಡುವುದು)</td><td>ಕಲಬುರಗಿ ಜಿಲ್ಲೆಯಲ್ಲಿ ಜಾರಿಗೊಳಿಸಿರುವ "ಜನಸ್ನೇಹಿ ಪೊಲೀಸ್" ವ್ಯವಸ್ಥೆ ಅಡಿಯಲ್ಲಿ ಸಾರ್ವಜನಿಕರಿಂದ ಕ್ಯೂಆರ್ ಕೋಡ್ ಮೂಲಕ ಪ್ರತಿಕ್ರಿಯೆ (ಫೀಡ್‌ಬ್ಯಾಕ್) ಪಡೆದು ತಕ್ಷಣವೇ ಸ್ಪಂದಿಸಿ ಉತ್ತಮ ರೀತಿಯಲ್ಲಿ ಸೇವೆ ಒದಗಿಸಲು ಸಹಾಯಕಾರಿಯಾಗುತ್ತಿದೆ.</td></tr>
<tr><td>ಆ</td><td>"ಜನಸ್ನೇಹಿ ಪೊಲೀಸ್" ವ್ಯವಸ್ಥೆ ಜಾರಿಗೆ ಬಂದಾಗಿನಿಂದ ಇದುವರೆಗೂ ಬಂದಿರುವ ದೂರುಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎಷ್ಟು ದೂರುಗಳನ್ನು ಇತ್ಯಾರ್ಥ ಪಡಿಸಲಾಗಿದೆ; (ವಿವರ ನೀಡುವದು)</td><td>ಕಲಬುರಗಿ ಜಿಲ್ಲೆಯಲ್ಲಿ "ಜನಸ್ನೇಹಿ ಪೊಲೀಸ್" ವ್ಯವಸ್ಥೆ ಜಾರಿ ಬಂದಾಗಿನಿಂದ ಇದುವರೆಗೂ ಬಂದಿರುವ ದೂರುಗಳ ಸಂಖ್ಯೆ ಹಾಗೂ ಇವುಗಳಲ್ಲಿ ಇತ್ಯಾರ್ಥಪಡಿಸಲಾಗಿರುವ ಸಂಖ್ಯೆ ಈ ಕೆಳಗಿನಂತಿದೆ.<br><table><tr><th>ಘಟಕ</th><th>ದೂರುಗಳ ಸಂಖ್ಯೆ</th><th>ಇತ್ಯಾರ್ಥಪಡಿಸಲಾಗಿರುವ ಸಂಖ್ಯೆ</th></tr><tr><td>ಕಲಬುರಗಿ ಜಿಲ್ಲೆ</td><td>445</td><td>445</td></tr></table></td></tr>
<tr><td>ಇ</td><td>ಇದುವರೆಗೂ ಪೊಲೀಸರು ಹಾಗೂ ಅಧಿಕಾರಿಗಳ ವಿರುದ್ಧ ದಾಖಲಾಗಿರುವ ದೂರುಗಳು ಎಷ್ಟು;</td><td>ಯಾವುದೇ ದೂರುಗಳು ದಾಖಲಾಗಿರುವುದಿಲ್ಲ.</td></tr>
<tr><td>ಈ</td><td>ಹೈದ್ರಾಬಾದ್ ಕರ್ನಾಟಕದ ಇನ್ನೂಳಿದ ಜಿಲ್ಲೆಗಳಲ್ಲಿಯೂ ಸಾರ್ವಜನಿಕರು ಪೊಲೀಸ್ ವ್ಯವಸ್ಥೆ ಕುರಿತು, ದೂರು ನೀಡುವ "ಜನ ಸ್ನೇಹಿ ಪೊಲೀಸ್" ವ್ಯವಸ್ಥೆಯನ್ನು ಜಾರಿಗೋಳಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಯಾವಾಗ ಜಾರಿಗೋಳಿಸುವುದು? (ವಿವರ ನೀಡುವುದು)</td><td>ಹೈದ್ರಾಬಾದ್ ಕರ್ನಾಟಕದ, ಉಳಿದ ಜಿಲ್ಲೆಗಳಲ್ಲಿಯೂ ಸಹ ಸಾರ್ವಜನಿಕರು ಪೊಲೀಸ್ ವ್ಯವಸ್ಥೆ ಕುರಿತು ದೂರು ನೀಡುವ "ಜನಸ್ನೇಹಿ ಪೊಲೀಸ್" ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.</td></tr>
</table>

ಹೆಚ್‌ಡಿ 504 ಎಸ್‌ಎಸ್‌ಟಿ 2023

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು



File No. HD/504/SST/2023-LO_A-HOME DEPARTMENT SEC (Computer No. 1245660)